ಓಡಾಟದ ಮಧ್ಯದಲ್ಲೇ, ಜೊತೆಗೆ ಊಟದ ಸಮಯಕ್ಕೂ ಮನೆಯಲ್ಲಿರುತ್ತಿದ್ದುದೇ ಅಪರೂಪ. ಇತರರ ಜೊತೆ ಊಟಮಾಡಲು ಯಾವತ್ತೂ ಮನೆಯಲ್ಲಿ ಇರದಿರುತ್ತಿದ್ದ ಅವನನ್ನು ಅಡುಗೆಯವಳಂತೂ ಸದಾ ಛೇಡಿಸುತ್ತಿದ್ದಳು. ಅವನ ಬಗ್ಗೆ ಅವಳಿಗೆ ಕಕ್ಕುಲತೆ ಜಾಸ್ತಿ, ಎರಡು ಹೊತ್ತೂ ಊಟಕ್ಕೆ ಅವನಿಗಾಗಿ ಒಂದಷ್ಟು ಬಿಸಿಬಿಸಿಯಾದ ಅಡುಗೆಯನ್ನು ಉಳಿಸಿರುತ್ತಿದ್ದಳು.

ರಜೆ ಮತ್ತದರ ಹಿಂಚುಮುಂಚಿನ ದಿನಗಳಲ್ಲಿ ಅಲ್ಯೋಷನಿಗೆ ಹೆಚ್ಚು ಕೆಲಸ ಬೀಳುತ್ತಿತ್ತು, ಆದರೂ ರಜೆಯ ದಿನಗಳಲ್ಲಿ ಅವನಿಗೆ ಖುಷಿ ಹೆಚ್ಚು, ಯಾಕಂದರೆ ಕೆಲಸ ಹೇಳಿದವರೆಲ್ಲ ಅವನಿಗೊಂದಷ್ಟು ಬಕ್ಷೀಸು ಕೊಡುತ್ತಿದ್ದರು, ಹೆಚ್ಚೇನಲ್ಲ, ಸಾಮಾನ್ಯವಾಗಿ ಸುಮಾರು ಅರುವತ್ತು ಕೊಪೆಕ್‌ಗಳಷ್ಟು. ಅದು ಅವನದೇ ದುಡ್ಡು, ತನಗೆ ಬೇಕಾದಂತೆ ಅದನ್ನವನು ಖರ್ಚುಮಾಡಬಹುದಿತ್ತು. ತನ್ನ ಸಂಬಳದ ಮೇಲಂತೂ ಅವನು ಕಣ್ಣು ಹಾಕುವಂತಿರಲಿಲ್ಲ, ಯಾಕಂದರೆ ಅವರಪ್ಪ ಬಂದು ಅಲ್ಯೋಷನ ಸಂಬಳವನ್ನು ನೇರವಾಗಿ ವ್ಯಾಪಾರಿಯಿಂದ ಪಡೆದು ಹೋಗುತ್ತಿದ್ದ; ಇವನಿಗೆ ಸಿಕ್ಕುತ್ತಿದ್ದುದು ತನ್ನಣ್ಣನ ಬೂಟುಗಳನ್ನು ಬೇಗ ಸವೆಸಿದ್ದಕ್ಕಾಗಿ ಒಂದಷ್ಟು ಬಿಸಿಬಿಸಿ ಬೈಗುಳ, ಅಷ್ಟೆ. ತನಗೆ ಸಿಕ್ಕಿದ್ದ ಬಕ್ಷೀಸು ಎರಡು ರೂಬಲ್‌ಗಳಷ್ಟಾದಾಗ, ಅಡುಗೆಯವಳ ಸಲಹೆಯಂತೆ ಅಲ್ಯೋಷ ಒಂದು ಕೆಂಪು ಸ್ವೆಟರನ್ನು ಕೊಂಡುಕೊಂಡಿದ್ದ. ಅವನದನ್ನು ಮೊದಲ ಬಾರಿಗೆ ಹಾಕಿಕೊಂಡು ನೋಡಿಕೊಂಡಾಗ, ಅಡುಗೆಮನೆಯಲ್ಲಿ ಬೆರಗುಗಣ್ಣುಗಳಿಂದ ನಿಂತುಬಿಟ್ಟಿದ್ದ.

ಅಲ್ಯೋಷ ಮಾತಾಡುತ್ತಿದ್ದುದೇ ಕಡಿಮೆ; ಆಡುತ್ತಿದ್ದುದು ಆವಶ್ಯಕವಾದದ್ದನ್ನು ಮಾತ್ರ, ಅದೂ ಸಂಕ್ಷಿಪ್ತವಾಗಿ ಮತ್ತು ಬೇಗ. ಅವನಿಗೆ ಅದೂ ಇದೂ ಕೆಲಸ ಹೇಳಿದಾಗ ಅಥವಾ ಅವನದನ್ನು ಮಾಡಲು ಸಾಧ್ಯವೇ ಅಂತ ಕೇಳಿದಾಗ, ಅವನು ಕೊಂಚವೂ ಹಿಂದುಮುಂದು ನೋಡದೆ 'ಓ, ಮಾಡ್ತೀನಿ' ಅಂತಲೇ ಹೇಳುತ್ತಿದ್ದ. ಜೊತೆಗೆ ಆ ಕೆಲಸ ಮಾಡಲು ತಕ್ಷಣವೇ ತೊಡಗಿಬಿಡುತ್ತಿದ್ದ.

ಅಲ್ಯೋಷನಿಗೆ ದೇವರ ಪ್ರಾರ್ಥನೆ ಹೇಗೆ ಮಾಡಬೇಕೆಂಬುದು ಸ್ವಲ್ಪವೂ ಗೊತ್ತಿರಲಿಲ್ಲ. ಅವರಮ್ಮ ಒಮ್ಮೆ ಪ್ರಾರ್ಥನೆಯ ಶ್ಲೋಕಗಳನ್ನು ಹೇಳಿಕೊಟ್ಟಿದ್ದಳು, ಆದರೆ ಅವಳು ಹೇಳಿಕೊಟ್ಟಂತೆಲ್ಲ ಇವನಿಗದು ಮರೆತೇ ಹೋಗಿತ್ತು. ಆದರೂ ಅವನು ಎರಡು ಹೊತ್ತೂ ಪ್ರಾರ್ಥನೆ ಮಾಡುತ್ತಿದ್ದ. ಆದರೆ ಸರಳವಾಗಿ, ಕೈಗಳನ್ನು ಶಿಲುಬೆಯಾಕಾರದಲ್ಲಿ ಎದೆಯ ಮೇಲೆ ಸರಿಸಿಕೊಳ್ಳುವುದರ ಮೂಲಕ.

ಅಲ್ಯೋಷ ಹೀಗೆ ಒಂದೂವರೆ ವರ್ಷ ಕಳೆದ; ಎರಡನೇ ವರ್ಷದ ಕೊನೆಯಲ್ಲಿ ಬದುಕಿನ ಅತ್ಯಂತ ಅಪರೂಪದ ಅನುಭವ ಅವನಿಗಾಯಿತು. ಇದು ಅವನೇ ಇದ್ದಕ್ಕಿದ್ದಂತೆ ಕಂಡುಕೊಂಡ ಅನುಭವ. ಅದು ಅವನಿಗೆ ಅತೀವ ಅಚ್ಚರಿಯಿಂಟುಮಾಡಿತು; ಜನರ ನಡುವೆ ಅವಶ್ಯಕತೆಗನುಗುಣವಾಗಿ ಉಂಟಾಗುವ ಅನಿವಾರ್ಯ ಸಂಬಂಧವಲ್ಲದೆ, ಅದಕ್ಕಿಂತ ಸಂಪೂರ್ಣ ಭಿನ್ನವಾದ ಸಂಬಂಧಗಳೂ ಉಂಟಾಗಬಹುದು; ಇಂತಹ ಸಂಬಂಧ ಯಾರದೋ ಬೂಟುಗಳನ್ನು ಶುಭ್ರಗೊಳಿಸುವುದೋ, ಹೇಳಿದ ಸಂದೇಶವನ್ನು ಎಲ್ಲಿಗೋ ಒಯ್ಯುವುದೋ ಆಗಿರದೆ, ಆವಶ್ಯಕತೆಯಿಲ್ಲದಿದ್ದರೂ ಒಬ್ಬರಿಗೆ ಸಹಾಯ ಮಾಡುವುದೋ ಅವರಿಗೆ ಪ್ರಿಯವಾಗುವುದೋ ಆದ ಸಂಬಂಧ ಇದು. ಅವನು ಕಂಡುಕೊಂಡ ಇನ್ನೊಂದು ಅಂಶವೆಂದರೆ, ತಾನು ಅಲ್ಯೋಷ ಎಂಬ ಒಬ್ಬ ವ್ಯಕ್ತಿ ಎಂಬ ಪ್ರಜ್ಞೆ. ಇದೆಲ್ಲ ಅವನ ಅನುಭವಕ್ಕೆ ಬಂದದ್ದು ಅಡುಗೆಯವಳಾದ ಉಸ್ಟಿಂಜಳಿಂದ. ಅವಳೊಬ್ಬ ಅನಾಥೆ, ಇನ್ನೂ ಚಿಕ್ಕ ವಯಸ್ಸಿನವಳಾದರೂ ಅಲ್ಯೋಷನಂತೆಯೇ ಕಷ್ಟಜೀವಿ. ಅವಳಿಗೆ ಅಲ್ಯೋಷನ ಬಗ್ಗೆ ಸಹಾನುಭೂತಿ; ಸೇವೆ ಮಾಡಲಲ್ಲ, ಒಬ್ಬ ವ್ಯಕ್ತಿಯಾಗಿ ತಾನು ಬೇರೊಂದು ವ್ಯಕ್ತಿಗೆ ಬೇಕಾದವನು ಎಂಬ ಅರಿವು ಅವನಿಗೆ ಮೊದಲ ಬಾರಿ ಉಂಟಾಯಿತು. ತನ್ನ ತಾಯಿ ಕಕ್ಕುಲತೆ ತೋರಿಸಿದಾಗಲೋ, ಅನುಕಂಪ ತೋರಿದಾಗಲೋ ಅದು ಅವನ ಗಮನಕ್ಕೇ ಬರುತ್ತಿರಲಿಲ್ಲ, ಏಕೆಂದರೆ ಅದು ತನ್ನ ಬಗ್ಗೆ ತನಗೆ ಸಹಾನುಭೂತಿ ಇರುವಷ್ಟೇ ಸಹಜ ಎಂದವನಿಗೆ ಅನ್ನಿಸುತ್ತಿತ್ತು. ಆದರೆ ಉಸ್ಟಿಂಜ ತನಗೆ ಪೂರ್ತಿ ಅಪರಿಚಿತಳಾದರೂ, ಅವಳಿಗೆ ತನ್ನ ಬಗ್ಗೆ ಕಕ್ಕುಲತೆ ಇದೆ ಎಂದವನಿಗೆ ಇದ್ದಕ್ಕಿದ್ದಂತೆಯೇ ಅನುಭವಕ್ಕೆ ಬಂದಿತ್ತು. ಅವಳು ಇವನಿಗಾಗಿ ಒಂದು ಮಡಕೆಯಲ್ಲಿ ಕಾಷಾ ಜೊತೆ ಒಂದಷ್ಟು ಬೆಣ್ಣೆ ತೆಗೆದಿರಿಸುತ್ತಿದ್ದಳು; ಇವನು ಅದನ್ನು ತಿನ್ನುವಾಗ ಅವನ ಪಕ್ಕದಲ್ಲಿಯೇ ಕೂತಿರುತ್ತಿದ್ದಳು, ತನ್ನ ಕೈಮೇಲೆ ಗದ್ದವನ್ನಿರಿಸಿಕೊಂಡು ಅವನು ತಿನ್ನುವುದನ್ನೇ ನೋಡುತ್ತಿದ್ದಳು. ಕತ್ತೆತ್ತಿ ಅವನು ಅವಳೆಡೆಗೆ ನೋಡಿದಾಗ ಅವಳು ಮುಗುಳ್ನಗುತ್ತಿದ್ದಳು, ಇವನೂ ನಸುನಗುತ್ತಿದ್ದ.

ಇದೆಲ್ಲ ಹೊಸ ಅನುಭವವಷ್ಟೇ ಅಲ್ಲ, ವಿಚಿತ್ರವೂ ಅನ್ನಿಸಿತ್ತು, ಜೊತೆಗೆ ಮೊದಮೊದಲು ಅವನಿಗೆ ಭಯವೂ ಆಗಿತ್ತು. ಇದೆಲ್ಲ ತನ್ನ ಕೆಲಸಕ್ಕೆ ತೊಡಕು ಅನ್ನಿಸಿತ್ತು. ಆದರೂ ಅವನಿಗೆ ಅದರಿಂದ ಎಂಥದೋ ಸಂತೋಷ ಉಂಟಾಗುತ್ತಿತ್ತು. ಯಾವಾಗಲಾದರೂ ಕತ್ತು ಬಾಗಿಸಿ ಉಸ್ಟಿಂಜ ಹೊಲಿದಿದ್ದ ತನ್ನ ಷರಾಯಿಯನ್ನು ನೋಡಿಕೊಂಡಾಗ, ತನ್ನ ತಲೆಯಾಡಿಸುತ್ತ ಅವನು ಮುಗುಳ್ನಗುತ್ತಿದ್ದ. ಕೆಲವೊಮ್ಮೆ ಕೆಲಸದಲ್ಲಿ ತೊಡಗಿರುವಾಗಲೋ ಸಂದೇಶ ಹೊತ್ತು ಹೋಗುತ್ತಿರುವಾಗಲೋ ಅವನಿಗೆ ಉಸ್ಟಿಂಜಳ ನೆನಪು ಬರುತ್ತಿತ್ತು, ಮಾತ್ರವಲ್ಲ ಆ, ಉಸ್ಟಿಂಜ! ಎಂಬ ಹಿತಕರ ಉದ್ಗಾರ ಹೊಮ್ಮುತ್ತಿತ್ತು. ಉಸ್ಟಿಂಜಳೂ ಅವನಿಗೆ ತನಗಾದ ಸಹಾಯವನ್ನೆಲ್ಲ ಮಾಡುತ್ತಿದ್ದಳು, ಇವನೂ ಅವಳಿಗೆ ಸಹಾಯ ಮಾಡುತ್ತಿದ್ದ. ಅವಳು ತನ್ನ ಬದುಕಿನ ಹಿನ್ನೆಲೆಯನ್ನೆಲ್ಲ ಹೇಳಿಕೊಂಡಿದ್ದಳು: ತೀರ ಚಿಕ್ಕಂದಿನಲ್ಲೇ ಅನಾಥೆಯಾದದ್ದು, ವಯಸ್ಸಾದ ತನ್ನ ಸೋದರತ್ತೆ ತನ್ನನ್ನು ಸಾಕಿದ್ದು, ಆನಂತರ ಅವಳೇ ದುಡಿಮೆಗೆಂದು ತನ್ನನ್ನು ಪಟ್ಟಣಕ್ಕೆ ಕಳಿಸಿದ್ದು, ವ್ಯಾಪಾರಿಯ ಮಗ ತನ್ನನ್ನು ಬಲೆಗೆ ಹಾಕಿಕೊಳ್ಳುವ ಮೂರ್ಖ ಪ್ರಯತ್ನ ಮಾಡಿದ್ದು, ತಾನು ಅವನನ್ನು ಎಲ್ಲಿಡಬೇಕೋ ಅಲ್ಲಿಟ್ಟದ್ದು — ಎಲ್ಲ. ಇದನ್ನೆಲ್ಲ ಅವನ ಮುಂದೆ ಹೇಳಿಕೊಳ್ಳುವುದಕ್ಕೆ ಅವಳಿಗೆ ಇಷ್ಟ, ಕೇಳುವುದರಲ್ಲಿ ಇವನಿಗೆ ಸಂತೋಷ. ಎಷ್ಟೋ ಜನ ರೈತಾಪಿ ಹುಡುಗರು ಪಟ್ಟಣದಲ್ಲಿ ಮನೆಗೆಲಸಕ್ಕೆಂದು ಬಂದು ಅಲ್ಲಿನ ಅಡುಗೆ ಹುಡುಗಿಯರನ್ನು ಮದುವೆಯಾದ ವಿಷಯವೂ ಇತರ ವಿಷಯಗಳ ಜೊತೆ ಅವನ ಕಿವಿಗೆ ಬಿದ್ದಿತ್ತು. 'ನಿಮ್ಮ ತಂದೆ ತಾಯಿಯರು ಬೇಗ ನಿನ್ನ ಮದುವೆ ಮಾಡ್ತಾರಾ' ಎಂದು ಅವಳೊಮ್ಮೆ ಅಲ್ಯೋಷನನ್ನು ಕೇಳಿದ್ದಳು; ಆಗ ತನಗೇನೂ ಗೊತ್ತಿಲ್ಲವೆಂದಿದ್ದ, ಜೊತೆಗೆ ತಮ್ಮ ಹಳ್ಳಿಯಲ್ಲಿ ತಾನು ಇಷ್ಟಪಡುವ ಯಾರೂ ಇಲ್ಲವೆಂದೂ ಸೇರಿಸಿದ್ದ.

'ಅಂದ್ರೆ, ನೀನು ಬೇರೆ ಯಾರನ್ನಾದ್ರೂ ಆರಿಸಿಕೊಂಡಿದ್ದೀಯೋ ಹ್ಯಾಗೆ?' ಅಂತ ಕೇಳಿದ್ದಳು.

'ಹೌದು, ನಿನ್ನ ಮದುವೆ ಆಗ್ತೀನಿ, ನಿಂಗೆ ಒಪ್ಪಿಗೇನಾ?'

'ಅಯ್ಯೋ ಗಡಿಗೆ, ನನ್ನ ಗಡಿಗೆ, ಎಷ್ಟು ಜಾಣತನದಿಂದ ನನ್ನ ಕೇಳಿದೆ!' ಅಂದಿದ್ದಳು, ತನ್ನ ಕೈಲಿದ್ದ ಸೌಟಿಂದ ಅವನ ಬೆನ್ನ ಮೇಲೆ ನವಿರಾಗಿ ಹೊಡೆದು.

ಶ್ರೋವೆಟೈಡ್ ಅವಧಿಯಲ್ಲಿ ಒಂದು ದಿನ ಅಲ್ಯೋಷನ ತಂದೆ ಯಥಾಪ್ರಕಾರ ಮಗನ ಸಂಬಳ ವಸೂಲು ಮಾಡಲೆಂದು ಪಟ್ಟಣಕ್ಕೆ ಬಂದ. ಅಲ್ಯೋಷ ಉಸ್ಟಿಂಜಳನ್ನು ಮದುವೆಯಾಗೋ ಹವಣಿಕೆಯಲ್ಲಿದ್ದಾನೆ ಅನ್ನುವುದನ್ನು ವ್ಯಾಪಾರಿಯ ಹೆಂಡತಿ ಇಷ್ಟು ಹೊತ್ತಿಗೆ ಪತ್ತೆಹಚ್ಚಿದ್ದಳು; ಅವಳಿಗದು ಇಷ್ಟವಿರಲಿಲ್ಲ. ಅವಳು ಬಸುರಾಗ್ತಾಳೆ, ಆಮೇಲೆ ಅವಳು ಏನು ತಾನೆ ಕೆಲಸ ಮಾಡಬಲ್ಲಳು! ಅನ್ನುವ ತನ್ನ ಯೋಚನೆಯನ್ನು ಗಂಡನ ಬಳಿ ಹೇಳಿದ್ದಳು.

ವ್ಯಾಪಾರಿ ಅಲ್ಯೋಷನ ಸಂಬಳದ ದುಡ್ಡನ್ನು ಅವರಪ್ಪನಿಗೆ ಎಣಿಸಿ ಕೊಟ್ಟ. ಆಗ ತಂದೆ, 'ನನ್ನ ಮಗ ಸರಿಯಾಗಿ ಕೆಲಸ ಮಾಡ್ತಾ ಇದಾನೆ ತಾನೆ?' ಎಂದು ವ್ಯಾಪಾರಿಯನ್ನು ಕೇಳಿದ. 'ನಾನು ಹಿಂದೆಯೇ ಹೇಳಿದ್ದೆನಲ್ಲ, ಅವನೊಬ್ಬ ಸಾಧು ಹುಡುಗ, ಹೇಳಿದ ಕೆಲಸ ಮಾಡ್ತಾನೆ' ಅಂತ ಸೇರಿಸಿದ.

'ಸಾಧುನೋ ಏನೋ, ಆದ್ರೆ ಅವನೊಂದು ಮೂರ್ಖ ಕೆಲಸ ಮಾಡಿದಾನೆ. ಅವನಿಗೆ ಅಂಥದ್ದು ಹೇಗೆ ಹೊಳೀತೂಂತ! ಅವನಿಗೆ ನಮ್ಮನೆ ಅಡುಗೆ ಹುಡುಗೀನ ಮದುವೆಯಾಗೋ ಆಲೋಚನೆ ಬಂದಿದೆ. ನಾನಂತೂ ಮದುವೆಯಾದೋರನ್ನ ಕೆಲಸಕ್ಕೆ ಇಟ್ಟುಕೊಳ್ಳಲ್ಲ; ನನಗದು ಸರಿ ಹೋಗಲ್ಲ.'

'ಹೌದಾ! ಅಯ್ಯೋ ಮೂರ್ಖ ಹುಡುಗ! ಅವನ ತಲೆಗೆ ಅಂಥ ಹಡಬೆ ಯೋಚನೆ ಹ್ಯಾಗೆ ಹೊಕ್ಕಿತು? ಧಣಿ, ತಾವು ಅದರ ಬಗ್ಗೆ ತಲೆ ಕೆಡಿಸ್ಕೊಬ್ಯಾಡಿ. ಅವನು ಅವನ್ನೆಲ್ಲ ಮರೆತುಬಿಡೋ ಹಾಗೆ ನಾನು ಮಾಡ್ತೀನಿ.'

ಹೀಗಂದವನೇ ಅವನು ನೇರವಾಗಿ ಅಡುಗೆ